**<u>ದಿನಾಂಕ 08.01.2026 ರಂದು ಡಿ.ಡಬ್ಲ್ಯು-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

<u>ಪಾಟೀ ಸವಾಲುಃ ಫಿರ್ಯಾದುದಾರರ ಪರ ಶ್ರೀ.ಡಿ ಡಿ ಜೆ ವಕೀಲರಿಂದಃ-</u>

1. ಈಗ ಸಾಕ್ಷಿಗೆ ಫಿರ್ಯಾದುದಾರರ ಪರ ವಕೀಲರು ನಿಪಿ-1ನ್ನು ತೋರಿಸಲಾಗಿ, ಸಾಕ್ಷಿಯು ಸದರಿ ಚೆಕ್ ತನ್ನ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಚೆಕ್ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ನಿಪಿ-1ನ್ನು ಫಿರ್ಯಾದುದಾರರ ಹೆಸರಿಗೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ-1ನ್ನು ಫಿರ್ಯಾದುದಾರರ ಹೆಸರಿಗೆ ಬರೆದುಕೊಟ್ಟಿದ್ದರೂ ಸಹ, ಈಗ ಇಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಫಿರ್ಯಾದುದಾರರಿಂದ ರೂ.2,65,000/- ಹಣ

ಕೈಗಡ ಸಾಲ ಎಂದು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮೊತ್ತಕ್ಕೆ ನಾನು ದಿನಾಂಕ 24.09.2022 ರಂದು ಕೈಗಡ ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪತ್ರಕ್ಕೆ ನಾನು ನನ್ನ ಭಾವಚಿತ್ರ ಲಗತ್ತಿಸಿ, ಅದರ ಮೇಲೆ ಸಹಿ ಮಾಡಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಪತ್ರಕ್ಕೆ ನಾನು ನನ್ನ ಭಾವಚಿತ್ರ ಲಗತ್ತಿಸಿ, ಅದರ ಮೇಲೆ ಸಹಿ ಮಾಡಿ ನೀಡಿದ್ದರೂ ಸಹಿತ, ಈಗ ಇಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಫಿರ್ಯಾದುದಾರರಿಂದ ಪಡೆದ ರೂ.2,65,000/- ಹಣವನ್ನು ಮರುಪಾವತಿ ಮಾಡಲು ನಿಪಿ-1 ಚೆಕ್ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡ ಫಿರ್ಯಾದುದಾರರಿಂದ ರೂ.75,000/- ಹಣ ಸಾಲ ಪಡೆದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ನನ್ನ ಗಂಡ ಸದರಿ ಮೊತ್ತದ ಸಾಲವನ್ನು ಮಾಡಿರುವುದು ಫಿರ್ಯಾದುದಾರರು ನನಗೆ ತಿಳಿಸಿರುತ್ತಾರೆ. ನನ್ನ ಗಂಡ ಸದರಿ ಮೊತ್ತದ ಸಾಲ ಮಾಡಿರುವುದನ್ನು ಫಿರ್ಯಾದುದಾರರು ನನಗೆ ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿರುವ ವ್ಯವಹಾರಕ್ಕೂ ಮತ್ತು ನಿಮ್ಮ ಗಂಡ ಮಾಡಿರುವ ವ್ಯವಹಾರಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಸಂಬಳ ಇರುವುದರಿಂದ ಖಾಸಗಿ ವ್ಯಕ್ತಿಗಳಿಂದ ಹಣ ಸಾಲ ಪಡೆಯುವ ಅನಿವಾರ್ಯತೆ ಉಂಟಾಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಬೇರೆ ಬೇರೆ ವ್ಯಕ್ತಿಗಳು ನನ್ನ ವಿರುದ್ಧ ಒಟ್ಟು 5 ಚೆಕ್ ಬೌನ್ಸ್ ಕೇಸಗಳನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವುಗಳ ಪೈಕಿ 3 ಪ್ರಕರಣಗಳಲ್ಲಿ ನನಗೆ ಬಿಡುಗಡೆಯಾಗಿದೆ ಎಂದು ಸ್ವತಃ ನುಡಿಯುತ್ತಾರೆ. ಸದರಿ ಪ್ರಕರಣಗಳ ಪೈಕಿ ಒಂದು ಪ್ರಕರಣದಲ್ಲಿ ನಾನು ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ನಾನು ಫಿರ್ಯಾದುದಾರರಿಂದ ಪಡೆದ ಸಾಲವನ್ನು ನನ್ನ ಮಗನ ಖಾತೆಯ ಮೂಲಕ ಹಂತಹಂತವಾಗಿ ಒಟ್ಟು ರೂ.43,000/- ಮತ್ತು ನಾನು ನಗದಾಗಿ ರೂ.32,000/- ಹಣವನ್ನು ಪಾವತಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಫಿರ್ಯಾದುದಾರರಿಗೆ ನಿಮ್ಮ ಖಾತೆ ಮೂಲಕ ಹಣ ಪಾವತಿ ಮಾಡಲು ಯಾವುದಾದರೂ ತೊಂದರೆ ಇತ್ತೇ? ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಫೋನ್ ಆಪರೇಟ್ ಮಾಡಲು ಸರಿಯಾಗಿ ಬರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಸಾಲ ಮರುಪಾವತಿ ಮಾಡಿದ ನಂತರ ಚೆಕ್ ಮತ್ತು ಬಾಂಡ್ ಮರಳಿ ನೀಡಲು ಫಿರ್ಯಾದುದಾರರನ್ನು ಕೇಳಿರುತ್ತೀರಾ? ಎಂಬ ಪ್ರಶ್ನೆಗೆ ಸಾಕ್ಷಿಯು ಫಿರ್ಯಾದುದಾರರು ನಂತರ ಕೊಡುವುದಾಗಿ ಹೇಳಿರುತ್ತಾರೆ ಎಂದು ಸ್ವತಃ

ನುಡಿಯುತ್ತಾರೆ. ಫಿರ್ಯಾದುದಾರರು ಸದರಿ ಚೆಕ್ ಮತ್ತು ಬಾಂಡನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ನಾನು ಅವರ ವಿರುದ್ಧ ಯಾವುದೇ ಕೇಸು ದಾಖಲಿಸಿಲ್ಲ.

4. ನನಗೆ ಮತ್ತು ನನ್ನ ಮಗನಿಗೆ ಸಾಕಷ್ಟು ಆದಾಯವಿರುವುದರಿಂದ, ಸಾಲ ತೆಗೆದುಕೊಳ್ಳುವ ಪರಿಸ್ಥಿತಿ ಬಂದಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಎಲ್ಲಾ ದಾಖಲೆಗಳು ಖೊಟ್ಟಿ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಫಿರ್ಯಾದುದಾರರಿಂದ ಸಾಲ ಪಡೆದು ಸದರಿ ಸಾಲದ ಮರುಪಾವತಿಗಾಗಿ ನಿಪಿ-1 ಚೆಕ್ ನೀಡಿದ್ದರೂ ಸಹಿತ, ಈಗ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದುದಾರರು ಚೆಕ್ ಮತ್ತು ಬಾಂಡನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR

Digitally signed by RAJASHEKHAR
Date: 2026.01.09 10:25:55 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.